# ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಅಧಿನಿಯಮ, 2004

## ಪ್ರಕರಣಗಳ ಪಟ್ಟಿ

ಪ್ರಕರಣಗಳು


1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆಗಳು
3. ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ
5. ನ್ಯಾಯಾಲಯದಲ್ಲಿ ಹಣವನ್ನು ಠೇವಣಿ ಇಡುವುದು ಮತ್ತು ಅರ್ಜಿಯನ್ನು ಸಲ್ಲಿಸುವುದು ಹಾಗೂ ಅದರ ಕಾರ್ಯ ವಿಧಾನ
6. ಸ್ವತ್ತಿನ ಸ್ವಾಧೀನತೆಯನ್ನು ಪುನಃ ಒಪ್ಪಿಸುವುದು
7. ಸ್ವಇಚ್ಛೆಯಿಂದ ಬಹಿರಂಗ ಪಡಿಸುವುದು
8. ಬಡ್ಡಿಯ ಹೊಂದಾಣಿಕೆ
9. ಆತ್ಮಹತ್ಯೆಗೆ ದುಷ್ಪ್ರೇರಣೆ
10. ನ್ಯಾಯಾಲಯ ಶುಲ್ಕ
11. ಅಧಿನಿಯಮವು ಇತರೆ ಕಾನೂನುಗಳನ್ನು ನ್ಯೂನಗೊಳಿಸದಿರುವುದು
12. ಕರ್ನಾಟಕ ಲೇವಾದೇವಿಗಾರರ ಅಧಿನಿಯಮ,1961ರ ಉಪಬಂಧಗಳ ಅನ್ವಯ
13. ಸಾಲದ ಮರು ಸಂದಾಯದ ಮುಂದೂಡಿಕೆ
14. ನಿರಸನ ಮತ್ತು ಉಳಿಸುವಿಕೆಗಳು


* * *

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

**2004ರ ಅಧಿನಿಯಮ ಸಂಖ್ಯೆ: 14.–** ಮಿತಿಮೀರಿದ ಬಡ್ಡಿಯನ್ನು ವಿಧಿಸುವ ವ್ಯಕ್ತಿಗಳ ಸಾಲದ ಸುಳಿಯಲ್ಲಿ ಸಿಕ್ಕಿಹಾಕಿಕೊಂಡು ಸಾರ್ವಜನಿಕರು, ಅದರಲ್ಲೂ ರೈತರು ಅನುಭವಿಸುತ್ತಿರುವ ತೊಂದರೆಗಳನ್ನು ನಿವಾರಿಸುವುದಕ್ಕಾಗಿ, ಯಾವ ವ್ಯಕ್ತಿಯೂ ಮಿತಿಮೀರಿದ ಬಡ್ಡಿ ವಿಧಿಸಬಾರದೆಂದು ನಿಷೇಧಿಸುವುದು ಅವಶ್ಯಕವೆಂದು ಪರಿಗಣಿಸಲಾಗಿದೆ. ಆದ್ದರಿಂದ ಅಂಥ ಮಿತಿಮೀರಿದ ಬಡ್ಡಿ ವಿಧಿಸಿ ಹಣ ಸಾಲ ನೀಡುವುದನ್ನು ನಿಷೇಧಿಸಲು ಮತ್ತು ಅದಕ್ಕೆ ಕಠಿಣ ಶಿಕ್ಷೆಯನ್ನು ವಿಧಿಸಲು ತೀರ್ಮಾನಿಸಲಾಗಿದೆ.

ಈ ವಿಧೇಯಕವು, ಇತರೆ ವಿಷಯಗಳೊಂದಿಗೆ ಈ ಮುಂದಿನ ಅಂಶಗಳಿಗಾಗಿ ಉಪಬಂಧ ಕಲ್ಪಿಸುತ್ತದೆ:–

(i) ಲೇವಾದೇವಿಗಾರನು ಮಿತಿಮೀರಿದ ಬಡ್ಡಿಯನ್ನು ವಿಧಿಸುವುದನ್ನು ನಿಷೇಧಿಸುವುದು;

(ii) ಮಿತಿಮೀರಿದ ಬಡ್ಡಿ ವಿಧಿಸಿದ್ದಕ್ಕಾಗಿ ಮತ್ತು ಸಾಲ ವಸೂಲಿಗಾಗಿ ಯಾವೊಬ್ಬ ಸಾಲಗಾರನನ್ನು ಪೀಡಿಸಿದ್ದಕ್ಕಾಗಿ ಅಥವಾ ಪೀಡಿಸಲು ದುಷ್ಪ್ರೇರಿಸಿದ್ದಕ್ಕಾಗಿ ದಂಡನೆ;

(iii) ಸಾಲ ಮತ್ತು ಬಡ್ಡಿಯ ತೀರಿಸಿರುವುದರ ದಾಖಲೆಯ ಆದೇಶ ಪಡೆಯುವುದಕ್ಕೆ ಸಾಲಗಾರನು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸುವುದಕ್ಕೆ ಉಪಬಂಧಗಳು;

(iv) ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರ 28ನೇ ಪ್ರಕರಣದ ಅಡಿಯಲ್ಲಿ ಸರ್ಕಾರವು ನಿಗದಿಪಡಿಸಿದ ದರವನ್ನು ಮಾತ್ರ ವಿಧಿಸುವ ತನ್ನ ಉದ್ದೇಶವನ್ನು ಪ್ರಕಟಪಡಿಸಿ ನ್ಯಾಯಾಲಯಕ್ಕೆ ಅರ್ಜಿಯನ್ನು ದಾಖಲಿಸುವ ಮೂಲಕ ಮಿತಿಮೀರಿದ ಬಡ್ಡಿಯನ್ನು ವಿಧಿಸುತ್ತಿರುವ ವ್ಯಕ್ತಿಯು ಸ್ವಯಿಚ್ಛಾ ಪ್ರಕಟಣೆ ಮಾಡುವುದಕ್ಕೆ ಉಪಬಂಧಗಳು;

(v) ಬಡ್ಡಿ ಹೊಂದಾಣಿಕೆ ಮಾಡುವುದು;

ಇಂದು ರಾಜ್ಯದಲ್ಲಿ ರೈತರು ಬಹಳ ತೊಂದರೆ ಅನುಭವಿಸುತ್ತಿದ್ದಾರೆ ಮತ್ತು ಸಾಲದ ಬಾಧೆ ತಾಳಲಾರದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ವರದಿಯು ಪ್ರತಿನಿತ್ಯ ಬರುತ್ತಿವೆ. ಎಡೆಬಿಡದೆ ಮೂರು ವರ್ಷಗಳಿಂದ ರಾಜ್ಯವನ್ನು ಕಾಡುತ್ತಿರುವ ತೀವ್ರ ಬರಗಾಲವೇ ಇದಕ್ಕೆ ಮುಖ್ಯ ಕಾರಣ.

ವಿಷಯವು ತುರ್ತು ಸ್ವರೂಪದ್ದಾಗಿದ್ದರಿಂದ ಮತ್ತು ರಾಜ್ಯ ವಿಧಾನಮಂಡಲದ ಉಭಯ ಸದನಗಳು ಅಧಿವೇಶನದಲ್ಲಿರದಿದ್ದುದರಿಂದ, ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಅಧ್ಯಾದೇಶ, 2003 (2003ರ ಕರ್ನಾಟಕ ಅಧ್ಯಾದೇಶ 6) ನ್ನು ಮೇಲ್ಕಂಡ ಉದ್ದೇಶವನ್ನು ಈಡೇರಿಸುವುದಕ್ಕಾಗಿ ಪ್ರಖ್ಯಾಪಿಸಲಾಯಿತು.

ಸದರಿ ಅಧ್ಯಾದೇಶದ ಬದಲಾಗಿ ಜಾರಿಗೆ ತರಲು ಈ ವಿಧೇಯಕವನ್ನು ಮಂಡಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

[2004ರ ವಿಧಾನಸಭೆಯ ವಿಧೇಯಕ ಸಂಖ್ಯೆ 14]

(ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿಯ 30ನೇ ನಮೂದು)

# 2004 ರ ಕರ್ನಾಟಕ ಅಧಿನಿಯಮ ಸಂಖ್ಯೆ 14

(2004 ರ ಮಾರ್ಚ್ ಆರನೇ ದಿನಾಂಕದಂದು ರಾಜ್ಯಪತ್ರದ ವಿಶೇಷ ಸಂಚಿಕೆಯಲ್ಲಿ ಮೊದಲು ಪ್ರಕಟವಾಗಿದೆ)

## ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಅಧಿನಿಯಮ, 2004

(2004 ರ ಮಾರ್ಚ್ ನಾಲ್ಕನೇ ದಿನಾಂಕದಂದು ರಾಜ್ಯಪಾಲರಿಂದ ಅನುಮತಿಯನ್ನು ಪಡೆಯಲಾಗಿದೆ)

ಯಾವೊಬ್ಬ ವ್ಯಕ್ತಿಯು ಮಿತಿಮೀರಿದ ಬಡ್ಡಿ ವಿಧಿಸುವುದನ್ನು ನಿಷೇಧಿಸಲು ಮತ್ತು ಅದಕ್ಕೆ ಪ್ರಾಸಂಗಿಕವಾದ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಸಾರ್ವಜನಿಕರನೇಕರು ಅನುಭವಿಸುತ್ತಿರುವ ತೊಂದರೆಗಳನ್ನು ನಿವಾರಿಸಲು ಮತ್ತು ಮಿತಿಮೀರಿದ ಬಡ್ಡಿಯನ್ನು ವಿಧಿಸುವ ಯಾವೊಬ್ಬ ವ್ಯಕ್ತಿಯ ಸಾಲದ ಸುಳಿಯಲ್ಲಿ ಅವರು ಸಿಕ್ಕಿಹಾಕಿಕೊಳ್ಳುವುದನ್ನು ತಪ್ಪಿಸಲು, ಅಂಥ ಮಿತಿಮೀರಿದ ಬಡ್ಡಿವಿಧಿಸಿ ಹಣ ಸಾಲ ನೀಡುವುದನ್ನು ನಿಷೇಧಿಸುವುದಕ್ಕಾಗಿ ಮತ್ತು ಅದಕ್ಕೆ ಕಠಿಣ ಶಿಕ್ಷೆವಿಧಿಸುವುದಕ್ಕಾಗಿ ಹಾಗೂ ಇಲ್ಲಿ ಇನ್ನು ಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಉಪಬಂಧ ಕಲ್ಪಿಸುವುದು ಅವಶ್ಯವೆಂದು ಪರಿಗಣಿಸಿರುವುದರಿಂದ;

ಇದು, ಭಾರತ ಗಣರಾಜ್ಯದ ಐವತ್ತೈದನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ:-** (1) ಈ ಅಧಿನಿಯಮವನ್ನು ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಅಧಿನಿಯಮ, 2004 ಎಂದು ಕರೆಯತಕ್ಕದ್ದು.

(2) ಇದು ಇಡೀ ಕರ್ನಾಟಕ ರಾಜ್ಯಕ್ಕೆ ವ್ಯಾಪ್ತವಾಗುತ್ತದೆ.

(3) ಇದು 2003ರ ಸೆಪ್ಟೆಂಬರ್ 5ನೇ ದಿನಾಂಕದಿಂದ ಜಾರಿಗೆ ಬಂದಿರುವುದಾಗಿ ಭಾವಿಸತಕ್ಕದ್ದು.

**2. ಪರಿಭಾಷೆಗಳು.-** (1) ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,

(ಎ)"ಸಾಲಗಾರ" ಎಂದರೆ, ಮಿತಿಮೀರಿದ ಬಡ್ಡಿಯ ಮೇಲೆ ಸಾಲವನ್ನು ತೆಗೆದುಕೊಂಡ ಒಬ್ಬ ವ್ಯಕ್ತಿ.

(ಬಿ) "ಮಿತಿಮೀರಿದ ಬಡ್ಡಿ" ಎಂದರೆ ಲೆಕ್ಕ ಹಾಕಿದಾಗ ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರ 28ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ನಿಗದಿ ಮಾಡಿದ್ದಕ್ಕಿಂತ ಹೆಚ್ಚಿನ ದರದ ಬಡ್ಡಿ ಆಗುವಂತೆ ಗಂಟೆಗಳ ಆಧಾರ, ದಿನದ ಆಧಾರ, ಕಂತುಗಳ ಆಧಾರ, ಮಾಸಿಕ ಆಧಾರದ ಮೇಲೆ ಅಥವಾ ಯಾವುದೇ ಇತರ ರೀತಿಯಲ್ಲಿ ಬಡ್ಡಿ ವಿಧಿಸುವುದು ಮತ್ತು ಅದು ಅವುಗಳನ್ನು ಒಳಗೊಳ್ಳುತ್ತದೆ.

(ಸಿ) "ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961" ಎಂದರೆ, ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 (1961ರ ಕರ್ನಾಟಕ ಅಧಿನಿಯಮ 12).

(ಡಿ)"ಸಾಲ" ಎಂದರೆ, ಮಿತಿಮೀರಿದ ಬಡ್ಡಿಯ ಮೇಲೆ ಸಾಲಗಾರನಿಗೆ ಮುಂಗಡವಾಗಿ ನೀಡಿದ ಹಣ.

---

ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ: 322 ದಿನಾಂಕ: 6.3.2004 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 55 ಶಾಸನ 2003

(2) ಈ ಅಧಿನಿಯಮದಲ್ಲಿ ಬಳಸಿದ ಆದರೆ, ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 ರಲ್ಲಿ ಅವುಗಳಿಗೆ ಕೊಡಲಾದ ಅರ್ಥವನ್ನೇ ಹೊಂದಿರತಕ್ಕದ್ದು.

**3. ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ.-** ಯಾವೊಬ್ಬ ವ್ಯಕ್ತಿಯೂ ತಾನು ನೀಡಿದ ಯಾವುದೇ ಸಾಲದ ಮೇಲೆ ಮಿತಿಮೀರಿದ ಬಡ್ಡಿಯನ್ನು ವಿಧಿಸತಕ್ಕದ್ದಲ್ಲ.

**4. ದಂಡ.-** ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರಲ್ಲಿ ಏನೇ ಒಳಗೊಂಡಿದ್ದರೂ, 3ನೇ ಪ್ರಕರಣದ ಉಪಬಂಧವನ್ನು ಉಲ್ಲಂಘಿಸುವ ಅಥವಾ ಯಾವುದೇ ಸಾಲದ ವಸೂಲಿಗಾಗಿ ಯಾವೊಬ್ಬ ಸಾಲಗಾರನನ್ನು ಪೀಡಿಸುವ ಅಥವಾ ಪೀಡಿಸುವುದಕ್ಕಾಗಿ ದುಷ್ಪ್ರೇರಿಸುವ ಯಾವೊಬ್ಬ ವ್ಯಕ್ತಿಯು, ಮೂರು

ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸದಿಂದ ಮತ್ತು ಮೂವತ್ತು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ಸಹ ದಂಡಿತನಾಗತಕ್ಕದ್ದು.

**5. ನ್ಯಾಯಾಲಯದಲ್ಲಿ ಹಣವನ್ನು ಠೇವಣಿ ಇಡುವುದು ಮತ್ತು ಅರ್ಜಿಯನ್ನು ಸಲ್ಲಿಸುವುದು ಹಾಗೂ ಅದರ ಕಾರ್ಯ ವಿಧಾನ.**- (1) ಸಾಲಗಾರನು ಯಾವೊಬ್ಬ ವ್ಯಕ್ತಿಯಿಂದ ತಾನು ಸ್ವೀಕರಿಸಿದ ಸಾಲದ ಸಂಬಂಧದಲ್ಲಿ ಬಾಕಿ ಇರುವ ಹಣವನ್ನು, ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರ 28ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ನಿಗದಿ ಮಾಡಿದ ದರದಲ್ಲಿ ಬಡ್ಡಿಯೊಡನೆ ಅಧಿಕಾರ ವ್ಯಾಪ್ತಿಯನ್ನುಳ್ಳ ನ್ಯಾಯಾಲಯದಲ್ಲಿ ಹಣವನ್ನು, ಪೂರ್ಣವಾಗಿ ಅಥವಾ ಸಂದರ್ಭಾನುಸಾರ ಭಾಗಶಃ ಸಾಲದ ತೀರಿಕೆಗಾಗಿ, ಸಾಲ ಮತ್ತು ಬಡ್ಡಿ ಹಣವನ್ನು ಠೇವಣಿ ಇಡಲಾಗಿದೆ ಎಂಬುದನ್ನು ದಾಖಲಿಸುವ ಅರ್ಜಿ ಸಹಿತ, ಠೇವಣಿ ಇಡಬಹುದು.

(2) ನ್ಯಾಯಾಲಯವು (1)ನೇ ಉಪಪ್ರಕರಣದ ಅಡಿಯಲ್ಲಿನ ಅರ್ಜಿಯನ್ನು ಸ್ವೀಕರಿಸಿದ ಮೇಲೆ, ಅರ್ಜಿಯಲ್ಲಿ ನಮೂದಿಸಿದ ವ್ಯಕ್ತಿಗೆ, ನ್ಯಾಯಾಲಯವು ನೀಡಬಹುದಾದಂತೆ, ಹದಿನೈದು ದಿನಗಳ ಅವಧಿಯ ಒಳಗೆ ತನ್ನ ಉತ್ತರಗಳನ್ನು ನೀಡುವಂತೆ ನಿರ್ದೇಶಿಸಿ ಅರ್ಜಿಯ ಒಂದು ಪ್ರತಿಯನ್ನು ಕಳುಹಿಸತಕ್ಕದ್ದು. ನ್ಯಾಯಾಲಯವು ವಿಚಾರಣೆಯ ತರುವಾಯ ಮತ್ತು ಉಭಯ ಪಕ್ಷಗಳ ಹೇಳಿಕೆಗಳನ್ನು ಪರಿಗಣಿಸಿದ ತರುವಾಯ, ಸಾಲ ಮತ್ತು ಅದರ ಬಡ್ಡಿಯು ಪೂರ್ಣವಾಗಿ ಅಥವಾ ಸಂದರ್ಭಾನುಸಾರ ಭಾಗಶಃ ತೀರಿಕೆಯಾಗಿದೆ ಎಂದು ದಾಖಲು ಮಾಡಿ ಆದೇಶಗಳನ್ನು ಹೊರಡಿಸಬಹುದು.

**6. ಸ್ವತ್ತಿನ ಸ್ವಾಧೀನತೆಯನ್ನು ಪುನಃ ಒಪ್ಪಿಸುವುದು.**- ನ್ಯಾಯಾಲಯವು, ಸಾಲಗಾರನು ಅರ್ಜಿಯನ್ನು ಸಲ್ಲಿಸಿದ ಮೇಲೆ, ನೀಡಿದ ಸಾಲದ ಅಥವಾ ಅದರ ಬಡ್ಡಿಯ ಮರುಪಾವತಿಗಾಗಿ ಯಾವೊಬ್ಬ ವ್ಯಕ್ತಿಯು ಬಲವಂತವಾಗಿ ತೆಗೆದುಕೊಂಡ ಚರ ಅಥವಾ ಸ್ಥಿರ ಸ್ವತ್ತು, ಯಾವುದಾದರು ಇದ್ದರೆ, ಅದರ ಸ್ವಾಧೀನತೆಯನ್ನು ಪುನಃ ಒಪ್ಪಿಸಬೇಕೆಂದು ಆದೇಶವನ್ನು ಹೊರಡಿಸಬಹುದು.

**7. ಸ್ವಇಚ್ಛೆಯಿಂದ ಬಹಿರಂಗ ಪಡಿಸುವುದು.**- ಮಿತಿಮೀರಿದ ಬಡ್ಡಿಯನ್ನು ವಿಧಿಸುತ್ತಿರುವ ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಪ್ರಕಟಣೆಯ ದಿನಾಂಕದಿಂದ ಒಂದು ತಿಂಗಳೊಳಗೆ ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರ 28ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ನಿಗದಿ ಮಾಡಿದ ದರದಲ್ಲಿ ಮಾತ್ರವೇ ತಾನು ನೀಡಿದ ಸಾಲದ ಮೇಲೆ ಬಡ್ಡಿಯನ್ನು ವಿಧಿಸುವ ತನ್ನ ಉದ್ದೇಶವನ್ನು ನ್ಯಾಯಾಲಯದ ಮುಂದೆ ಪ್ರಕಟಪಡಿಸುವ ಒಂದು ಅರ್ಜಿಯನ್ನು ದಾಖಲು ಮಾಡಬಹುದು ಮತ್ತು ಹಾಗೆ ಪ್ರಕಟಪಡಿಸಿದ ತರುವಾಯ ಅಂಥ ಸಾಲದ ಸಂಬಂಧದಲ್ಲಿ ಬಡ್ಡಿಯನ್ನು ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರ 28ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ನಿಗದಿಪಡಿಸತಕ್ಕದ್ದು ಮತ್ತು ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳಿಗಾಗಿ ಯಾವುದೇ ಅಭಿಯೋಜನೆಯನ್ನು ಅಂಥ ಸಾಲದ ಸಂಬಂಧದಲ್ಲಿ ಹೂಡತಕ್ಕದ್ದಲ್ಲ.

**8. ಬಡ್ಡಿಯ ಹೊಂದಾಣಿಕೆ.**- ನ್ಯಾಯಾಲಯವು, ಬಡ್ಡಿಯೂ ಸೇರಿದಂತೆ ಸಾಲದ ಇತ್ಯರ್ಥಕ್ಕಾಗಿ ಸಾಲಗಾರನು ದಾಖಲು ಮಾಡಿದ ಅರ್ಜಿಗೆ ಸಂಬಂಧಿಸಿದ ಸಾಲಕ್ಕಾಗಿ ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರ 28ನೇ ಪ್ರಕರಣದ ಅಡಿಯಲ್ಲಿ ರಾಜ್ಯ ಸರ್ಕಾರವು ನಿಗದಿಪಡಿಸಿದ ಬಡ್ಡಿಯ ದರಕ್ಕಿಂತ ಹೆಚ್ಚಿನ ದರವನ್ನು ಸಾಲಗಾರನು ಸಂದಾಯ ಮಾಡಿದ್ದಲ್ಲಿ ಆ ಬಡ್ಡಿಯನ್ನು ಹೊಂದಾಣಿಕೆ ಮಾಡುವಂತೆ ಆದೇಶ ಹೊರಡಿಸಬಹುದು.

**9. ಆತ್ಮಹತ್ಯೆಗೆ ದುಷ್ಪ್ರೇರಣೆ.**- ಒಬ್ಬ ಸಾಲಗಾರ ಅಥವಾ ಅವನ ಕುಟುಂಬದ ಯಾವೊಬ್ಬ ಸದಸ್ಯನು ಆತ್ಮಹತ್ಯೆ ಮಾಡಿಕೊಂಡಲ್ಲಿ ಮತ್ತು ಅಂಥ ಆತ್ಮಹತ್ಯೆಗೆ ನಿಕಟಪೂರ್ವದಲ್ಲಿ, ಸಾಲಗಾರ ಅಥವಾ ಅವನ ಕುಟುಂಬದ ಯಾವೊಬ್ಬ ಸದಸ್ಯನನ್ನು, ಯಾವೊಬ್ಬ ವ್ಯಕ್ತಿಯು ಪೀಡಿಸಿದ್ದನೆಂದು ತೋರಿಸಿದರೆ, ಅದಕ್ಕೆ ವಿರುದ್ಧವಾಗಿ ರುಜುವಾತಾದಾಗ ಹೊರತು, ಸಾಲ ನೀಡಿದ ವ್ಯಕ್ತಿಯು, ಅಂಥ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ದುಷ್ಪ್ರೇರಿಸಿದ್ದಾನೆ ಎಂದು ಭಾವಿಸತಕ್ಕದ್ದು.

**ವಿವರಣೆ:**-ಈ ಪ್ರಕರಣದ ಉದ್ದೇಶಕ್ಕಾಗಿ "ಕುಟುಂಬದ ಸದಸ್ಯ" ಎಂದರೆ, ಗಂಡ ಅಥವಾ ಹೆಂಡತಿ, ಅವಿವಾಹಿತ ಮಗಳು ಅಥವಾ ಅವಿವಾಹಿತ ಮಗ.

**10. ನ್ಯಾಯಾಲಯ ಶುಲ್ಕ.**- ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನಲ್ಲಿ ಏನೇ ಒಳಗೊಂಡಿದ್ದರೂ, ಈ ಅಧಿನಿಯಮದ ಅಡಿಯಲ್ಲಿನ ಅರ್ಜಿಗೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ನ್ಯಾಯಾಲಯ ಶುಲ್ಕವು ಐವತ್ತು ರೂಪಾಯಿಗಳಾಗಿರತಕ್ಕದ್ದು.

**11. ಅಧಿನಿಯಮವು ಇತರೆ ಕಾನೂನುಗಳನ್ನು ನ್ಯೂನಗೊಳಿಸದಿರುವುದು.**- ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರ 28ನೇ ಪ್ರಕರಣದ (3)ನೇ ಉಪಪ್ರಕರಣದ ಮತ್ತು 38 ರಿಂದ 40ನೇ ಪ್ರಕರಣಗಳ ಉಪಬಂಧಗಳು ಈ ಅಧಿನಿಯಮದ ಅಡಿಯಲ್ಲಿನ ಅಪರಾಧಗಳಿಗೆ ಅನ್ವಯಿಸತಕ್ಕದ್ದಲ್ಲ. ಈ ಅಧಿನಿಯಮದ ಉಪಬಂಧಗಳು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಇತರೆ ಕಾನೂನಿನ ಉಪಬಂಧಗಳ ಜೊತೆಗೆ ಹೆಚ್ಚಿಗೆಯಾಗಿ ಇರತಕ್ಕದ್ದು ಮತ್ತು ಅವನ್ನು ನ್ಯೂನಗೊಳಿಸತಕ್ಕದ್ದಲ್ಲ.

**12. ಕರ್ನಾಟಕ ಲೇವಾದೇವಿಗಾರರ ಅಧಿನಿಯಮ,1961ರ ಉಪಬಂಧಗಳ ಅನ್ವಯ.**- ಈ ಅಧಿನಿಯಮದ ಉಪಬಂಧಗಳಿಗೆ ಒಳಪಟ್ಟು, ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರ ಉಪಬಂಧಗಳು, ಅವು ಲೇವಾದೇವಿಗಾರರಿಗೆ ಅನ್ವಯವಾಗುವಷ್ಟರ ಮಟ್ಟಿಗೆ, ಈ ಅಧಿನಿಯಮದ 3ನೇ ಪ್ರಕರಣದಲ್ಲಿ ಉಲ್ಲೇಖಿಸಿದ ಒಬ್ಬ ವ್ಯಕ್ತಿಗೆ ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**ವಿವರಣೆ:**- ಒಬ್ಬ ವ್ಯಕ್ತಿಯ ಕೃತ್ಯವು ಈ ಅಧಿನಿಯಮದ ಅಡಿಯಲ್ಲಿ ಮತ್ತು ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961ರ ಅಡಿಯಲ್ಲಿ ಒಂದು ಅಪರಾಧವಾಗಿದ್ದರೆ, ಈ ಅಧಿನಿಯಮದ ಅಡಿಯಲ್ಲಿ ಅವನ ವಿರುದ್ಧ ಅಭಿಯೋಜನೆಯನ್ನು ಪ್ರಾರಂಭಿಸತಕ್ಕದ್ದು.

**13. ಸಾಲದ ಮರು ಸಂದಾಯದ ಮುಂದೂಡಿಕೆ.**- ಕರ್ನಾಟಕ ಲೇವಾದೇವಿಗಾರರ ಅಧಿನಿಯಮ, 1961 ರಲ್ಲಿ ಏನೇ ಒಳಗೊಂಡಿದ್ದರೂ, ಸಾಲಗಾರನು ರೈತ ಅಥವಾ ಕೃಷಿ ಕಾರ್ಮಿಕನಾಗಿದ್ದಲ್ಲಿ ಅವನ ವಿರುದ್ಧ, ಈ ಅಧಿನಿಯಮದ ಪ್ರಾರಂಭದ ದಿನಾಂಕದಿಂದ ಒಂದು ವರ್ಷದ ಅವಧಿಯವರೆಗೆ, ಸಾಲ ವಸೂಲಿಗಾಗಿ ಯಾವುದೇ ಕ್ರಮವನ್ನು ಕೈಗೊಳ್ಳತಕ್ಕದ್ದಲ್ಲ.

**14. ನಿರಸನ ಮತ್ತು ಉಳಿಸುವಿಕೆಗಳು.**- (1) ಕರ್ನಾಟಕ ಮಿತಿಮೀರಿದ ಬಡ್ಡಿ ವಿಧಿಸುವಿಕೆಯ ನಿಷೇಧ ಅಧ್ಯಾದೇಶ, 2003ನ್ನು (2003ರ ಕರ್ನಾಟಕ ಅಧ್ಯಾದೇಶ ಸಂಖ್ಯೆ 6) ಈ ಮೂಲಕ ನಿರಸನಗೊಳಿಸಲಾಗಿದೆ.

(2) ಹಾಗೆ ನಿರಸನಗೊಂಡಿದ್ದಾಗ್ಯೂ, ಸದರಿ ಅಧ್ಯಾದೇಶದ ಅಡಿಯಲ್ಲಿ ಮಾಡಿದ ಯಾವುದೇ ಕಾರ್ಯ ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಅಡಿಯಲ್ಲಿ ಮಾಡಲಾಗಿದೆ ಅಥವಾ ಕೈಗೊಳ್ಳಲಾಗಿದೆ ಎಂದು ಭಾವಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

**ಮ.ರಾ. ಹೆಗಡೆ**
ಸರ್ಕಾರದ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ.